# ಶ್ರೀರಾಮಕೃಷ್ಣ ವಚನವೇದದಿಂದ



## ಬ್ರಹ್ಮ ಶಕ್ತಿ ಅಭೇದ

ಬ್ರಹ್ಮನಿಗೂ ಶಕ್ತಿಗೂ ಅಭೇದ. ಲಂಕೆಯಿಂದ ಹಿಂದಿರುಗಿದ ನಂತರ ಹನುಮಂತ ರಾಮನನ್ನು ಸ್ತೋತ್ರ ಮಾಡುತ್ತ ಹೇಳಲಾರಂಭಿಸಿದ: "ಹೇ ರಾಮ, ನೀನೇ ಪರಬ್ರಹ್ಮ, ಸೀತೆಯೇ ನಿನ್ನ ಶಕ್ತಿ; ಆದರೆ ನೀವಿಬ್ಬರೂ ಒಂದೇ, ಭೇದ ರಹಿತರು." ಬ್ರಹ್ಮ ಶಕ್ತಿ, ಹಾವು ಅದರ ಸೊಟ್ಟಸೊಟ್ಟ ಗತಿ ಇದ್ದಹಾಗೆ. ಹಾವನ್ನು ಭಾವಿಸಿದರೆ, ಅದರ ಸೊಟ್ಟಸೊಟ್ಟ ಗತಿಯನ್ನೂ ಭಾವಿಸಲೇ ಬೇಕಾಗುತ್ತದೆ. ಹಾವಿನ ಸೊಟ್ಟಸೊಟ್ಟ ಗತಿಯನ್ನು ಭಾವಿಸಿದರೆ, ಅದರೊಡನೆ ಹಾವನ್ನೂ ಭಾವಿಸಲೇ ಬೇಕಾಗುತ್ತದೆ. ಹಾಲನ್ನು ಭಾವಿಸಿದರೆ, ಅದರೊಡನೆ ಅದರ ಬಿಳಿಬಣ್ಣವನ್ನೂ ಭಾವಿಸಲೇ ಬೇಕಾಗುತ್ತದೆ. ಹಾಲಿನ ಬಿಳಿ ಬಣ್ಣವನ್ನು ಭಾವಿಸಿದರೆ ಅದರೊಡನೆ ಹಾಲನ್ನೂ ಭಾವಿಸಲೇ ಬೇಕಾಗುತ್ತದೆ. ನೀರನ್ನು ಭಾವಿಸಿದರೆ, ಅದರೊಡನೆ ಅದರ ತೋಯುವ ಶಕ್ತಿಯನ್ನೂ ಭಾವಿಸಲೇ ಬೇಕಾಗುತ್ತದೆ. ನೀರಿನ ತೋಯುವ ಶಕ್ತಿಯನ್ನು ಭಾವಿಸಿದರೆ, ಅದರೊಡನೆ ನೀರನ್ನೂ ಭಾವಿಸಲೇ ಬೇಕಾಗುತ್ತದೆ.

ಈ ಆದ್ಯಾಶಕ್ತಿ, ಎಂದರೆ ಮಹಾಮಾಯೆ ಬ್ರಹ್ಮನನ್ನು ಮುಚ್ಚಿಬಿಟ್ಟಿದೆ. ಈ ಆವರಣ ಹೋದೊಡನೆ ಅನುಭವವಾಗುತ್ತದೆ, "ಏನಾಗಿದ್ದೆನೋ ಅದೇ ಆಗಿದ್ದೇನೆ," "ನಾನೇ ನೀನು; ನೀನೇ ನಾನು" ಎಂದು.

ಭಗವಂತ, ಭಗವಂತನ ಶಕ್ತಿ: ಬ್ರಹ್ಮ, ಬ್ರಹ್ಮನ ಶಕ್ತಿ—ಬಿಟ್ಟರೆ ಬೇರೇನೂ ಇಲ್ಲ. ನಾರದ ಶ್ರೀರಾಮಚಂದ್ರನನ್ನು ಸ್ತೋತ್ರ ಮಾಡುತ್ತ ಮಾಡುತ್ತ ಹೇಳಿದ: "ಹೇ ರಾಮ, ನೀನೇ ಶಿವ, ಸೀತೆಯೇ ಭಗವತಿ; ನೀನೇ ಬ್ರಹ್ಮ, ಸೀತೆಯೇ ಬ್ರಹ್ಮಾಣಿ; ನೀನೇ ಇಂದ್ರ, ಸೀತೆಯೇ ಇಂದ್ರಾಣಿ; ನೀನೇ ನಾರಾಯಣ, ಸೀತೆಯೇ ಲಕ್ಷ್ಮೀ; ಪುರುಷವಾಚಕವಾದ್ದೆಲ್ಲ ನೀನೇ, ಸ್ತ್ರೀವಾಚಕವಾದ್ದೆಲ್ಲಾ ಸೀತೆಯೇ."

ನೀನು ಭಗವದ್ರೂಪದಲ್ಲಿ ಶ್ರದ್ಧೆಯಿಡು. ಬ್ರಹ್ಮಜ್ಞಾನ ದೊರೆತ ನಂತರ ಮಾತ್ರ ಅಭೇದ ಜ್ಞಾನ—ಬ್ರಹ್ಮನಿಗೂ ಶಕ್ತಿಗೂ ಅಭೇದ ಎಂಬ ಜ್ಞಾನ ಉಂಟಾಗುತ್ತದೆ. ಬೆಂಕಿ, ಅದರ ಸುಡುವ ಶಕ್ತಿ ಅನನ್ಯವಾಗಿರುವುವು. ಹಾಗೆ ಬ್ರಹ್ಮ ಆತನ ಶಕ್ತಿ ಅನನ್ಯ. ಬೆಂಕಿಯನ್ನು ಭಾವಿಸಿದರೆ, ಬೆಂಕಿಯ ಸುಡುವ ಶಕ್ತಿಯನ್ನೂ ಭಾವಿಸಲೇಬೇಕು; ಇದರ ಹಾಗೆ ಬ್ರಹ್ಮ, ಆತನ ಶಕ್ತಿ ಅನನ್ಯ.

ಯಾರು ಬ್ರಹ್ಮನೋ, ಆತನೇ ಶಕ್ತಿ. ಆತನನ್ನೇ ನಾನು 'ಭಗವತಿ' 'ಬ್ರಹ್ಮ' ಅಂತ ಕರೆಯುತ್ತೇನೆ. ಸೃಷ್ಟಿ-ಸ್ಥಿತಿ-ಪ್ರಳಯ ಕಾರ್ಯ ಮಾಡುವಾಗ ಆತನನ್ನೇ 'ಶಕ್ತಿ' ಅಂತ ಕರೆಯುತ್ತೇನೆ. ನೀರು ಕೆಲವು ವೇಳೆ ಸ್ಥಿರವಾಗಿ, ಇನ್ನೂ ಕೆಲವು ವೇಳೆ ಅಲೆಗಳಿಂದ ಕೂಡಿ ಇರುವುದಿಲ್ಲವೇ? ಅದು ಹಾಗೆ. ಶಕ್ತಿಯ ಲೀಲೆಯಿಂದಲೇ ಅವತಾರದ ಉತ್ಪನ್ನ. ಅವತಾರಪುರುಷ ಪ್ರೇಮಭಕ್ತಿಯನ್ನು ಕಲಿಸಿಕೊಡಲು ಬರುತ್ತಾನೆ. ಆತನನ್ನು ಹಸುವಿನ ಕೆಚ್ಚಲಿಗೆ ಹೋಲಿಸಬಹುದು. ಹಾಲು ಬೇಕಾಗಿದ್ದರೆ, ಅದು ಕೆಚ್ಚಲಿನ ಮೂಲಕವೇ ಬರಬೇಕು. ಭಗವಂತ ಮನುಷ್ಯನಾಗಿ ಅವತೀರ್ಣನಾಗುತ್ತಾನೆ. ಸರೋವರದ ಗುಂಡಿಗಳಲ್ಲಿ ಅನೇಕ ಮೀನುಗಳು ಬಂದು ಸೇರಿಕೊಳ್ಳುವ ಹಾಗೆ, ಅವತಾರ ಪುರುಷನಲ್ಲಿ ಭಗವಂತನ ಶಕ್ತಿ ವಿಶೇಷವಾಗಿ ತುಂಬಿಕೊಂಡಿರುತ್ತದೆ.

(ಪರಮಹಂಸರು ಕೇಶವನಿಗೆ ಹೇಳಿದರು): "ನೀನು ಆದ್ಯಾಶಕ್ತಿಯನ್ನು ಒಪ್ಪಿಕೊಂಡುಬಿಡು. ಬ್ರಹ್ಮನಿಗೂ ಶಕ್ತಿಗೂ ಅಭೇದ. ಯಾರು ಬ್ರಹ್ಮನೋ ಆತನೇ ಶಕ್ತಿ. ದೇಹಬುದ್ಧಿ ಇರುವವರೆಗೆ ದ್ವೈತ ಎಂಬ ಬೋಧೆ. ಬಾಯಿಬಿಡುವುದು ಅಂದರೇ ದ್ವೈತ." ಕೇಶವಸೇನ ಕೊನೆಗೆ ಕಾಳಿಯನ್ನು ಸ್ವೀಕರಿಸಿದ. ಯಾರು ಶ್ಯಾಮೆಯೋ ಆತನೇ ಬ್ರಹ್ಮ. ಯಾರು ಸಾಕಾರನೋ ಆತನೇ ನಿರಾಕಾರ. ಯಾರು ಸಗುಣನೋ ಆತನೇ ನಿರ್ಗುಣ. ಬ್ರಹ್ಮನೇ ಶಕ್ತಿ; ಶಕ್ತಿಯೇ ಬ್ರಹ್ಮ. ಇಬ್ಬರಿಗೂ ಭೇದವಿಲ್ಲ. ಯಾರು ಸಚ್ಚಿದಾನಂದಮಯನೋ ಆತನೇ ಸಚ್ಚಿದಾನಂದಮಯಿಯೂ ಕೂಡ.

ಒಬ್ಬ ರಾಜ ಒಮ್ಮೆ ಒಬ್ಬ ಯೋಗಿಗೆ ಹೇಳಿದ, ತನಗೆ ಒಂದೇಒಂದು ಪದದಲ್ಲಿ ಬ್ರಹ್ಮಜ್ಞಾನ ದೊರಕಿಸಿಕೊಡಬೇಕು ಎಂಬುದಾಗಿ. ಯೋಗಿ ಹೇಳಿದ: "ಆಗಲಿ, ಒಂದು ಪದದಿಂದಲೇ ನಿನಗೆ ಬ್ರಹ್ಮಜ್ಞಾನ ದೊರಕಿಸಿಕೊಡುತ್ತೇನೆ." ಸ್ವಲ್ಪ ಹೊತ್ತಾದ ನಂತರ ಒಬ್ಬ ಮಂತ್ರವಾದಿ ದೊರೆಯ ಹತ್ತಿರಕ್ಕೆ ಇದ್ದಕ್ಕಿದ್ದ ಹಾಗೆ ಬರುತ್ತಾನೆ. ದೊರೆಯ ಕಣ್ಣಿಗೆ ಬೀಳುತ್ತದೆ, ಆತ ಎರಡು ಬೆರಳುಗಳನ್ನು ಬಹಳವಾಗಿ ತಿರುಗಿಸುತ್ತಿರುವುದು ಮತ್ತು ಹೇಳುತ್ತಿರುವುದು, "ರಾಜ, ಇಲ್ಲಿ ನೋಡು! ಇಲ್ಲಿ ನೋಡು!" ದೊರೆ ಆಶ್ಚರ್ಯಚಕಿತನಾಗಿ ನೋಡಲಾರಂಭಿಸುತ್ತಾನೆ. ಹಾಗೆ ನೋಡುತ್ತಿದ್ದ ಹಾಗೆ ಕೆಲವು ನಿಮಿಷಗಳ ನಂತರ ಎರಡು ಬೆರಳೂ ಕೂಡಿ ಒಂದೇ ಆಗಿಬಿಡುತ್ತದೆ. ಬಳಿಕ ಮಂತ್ರವಾದಿ ಆ ಒಂದೇ ಬೆರಳನ್ನು ಸುತ್ತುತ್ತ ಹೇಳುತ್ತಾನೆ: "ರಾಜ ಇಲ್ಲಿ ನೋಡು! ಇಲ್ಲಿ ನೋಡು!" ಇದರ ಇಂಗಿತಾರ್ಥ, ಮೊದಮೊದಲು ಬ್ರಹ್ಮ ಮತ್ತು ಆದ್ಯಾಶಕ್ತಿ ಎರಡು ವಸ್ತುಗಳು ಎಂಬ ಬೋಧೆಯಾಗುತ್ತದೆ. ಆದರೆ ಬ್ರಹ್ಮಜ್ಞಾನ ದೊರೆತ ನಂತರ ಅವು ಎರಡು ಎಂಬ ಬೋಧೆಯಾಗದು. ಆಗ ಅಭೇದ ಎಂಬ ಬೋಧೆ—ಒಂದೇ ಎಂಬ ಬೋಧೆ. ಏಕಮೇವಾದ್ವಿತೀಯವಮ್—ಅದ್ವೈತ ಎಂಬ ಬೋಧೆ.